Most of the Major beneficieries have come forward to deposit the money. I think Government should come forward with certain amount and start the work immediately because monsoon season is over. If the work begins it will be completed at least by June.

ಶ್ರೀ ಆರ್. ವಿ. ದೇಶಪಾಂಡೆ.— ನಾನು ಈಗಾಗಲೇ ಹೇಳಿದ್ದೇನೆ. ಬೇಸಿಗೆಯ ಮೂರು ತಿಂಗಳಲ್ಲಿ ಆ ರಿವರ್ ಡೈಕ್ ಆಗುತ್ತದೆ ಟೆಲ್ಲಿ ಸ್ಕೂಪೇಜ್ ಕೆಪ್ಯಾಸಿಟಿ ಆಗಬೇಕು ಅವರಿಗೆ ನೀರು ದೊರಕಿಸಿ ಕೊಡಬೇಕೆಂಬ ಉದ್ದೇಶದಿಂದ ೧.೫೦ ಲಕ್ಷ ರೂಪಾಯಿಗಳ ಸ್ಕೀಮ್ ಒಂದನ್ನು ತಯಾರು ಮಾಡಿದ್ದೇವೆ. ಅಷ್ಟು ಹಣ ಬೋರ್ಡಿನಲ್ಲಿ ಇಲ್ಲದೇ ಇರುವುದರಿಂದ, ಹತ್ತು ಬೇರೆ ಬೇರೆ ಕಾರ್ಪೊರೇಷನ್ಸ್ ಗಳು, ಸಂಸ್ಥೆಗಳು ಇದಕ್ಕೆ ಹಣ ಕೊಡುವುದಕ್ಕೆ ಮುಂದೆ ಬಂದಿದ್ದಾರೆ. ಆದರೆ ಅವರಿಂದ ಇನ್ನೂ ಹಣ ಬಂದಿಲ್ಲ. ಇದನ್ನು ಪರ್ಸ್ಯೂ ಮಾಡಿ ಅದಷ್ಟು ಬೇಗ ಹಣವನ್ನು ಜಮಾ ಮಾಡುತ್ತೇವೆ. ಈ ಸ್ಕೀಮನ್ನು ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್‌ಗೆ ಕಳಿಸಲಿಕ್ಕೆ ಅದಷ್ಟು ಬೇಗ ಕ್ರಮ ತೆಗೆದುಕೊಂಡು ಮಾಡಿಸುತ್ತೇನೆ.

ಅಧ್ಯಕ್ಷರು.— ಈಗ ಎಲ್ಲಾ ಪ್ರಶ್ನೆಗಳೂ ಮುಗಿದವು ಪ್ರಶ್ನೋತ್ತರ ವೇಳೆ ಮುಗಿಯಿತು.

ದಿನಾಂಕ ೧೧ ಮತ್ತು ೧೨ ಅಕ್ಟೋಬರ್ ೧೯೮೮ರಂದು(ಚುಕ್ಕೆ ಹಾಗೂ ಚುಕ್ಕೆಯೇ ಪಟ್ಟಿ) ಪ್ರಶ್ನೋತ್ತರಗಳು

ಅಧ್ಯಕ್ಷರು.—ದಿನಾಂಕ ೧೧ ಮತ್ತು ೧೨ ಅಕ್ಟೋಬರ್ ರಂದು ಅಧಿವೇಶನವು ಇಲ್ಲದಿರುವ ಕಾರಣ ಆ ದಿನಗಳ ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಚುಕ್ಕೆಯೇ ಹಾಗೂ ಚುಕ್ಕೆಯೇ ಪಟ್ಟಿಗಳ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಆಸ್ಪತ್ರೆಗಳಿಗೆ ಔಷಧಿ ಸರಬರಾಜು ಬಗ್ಗೆ

೫೦೨೦. ಶ್ರೀ ಕೆ. ಪಸಂತಬಂಗೇರ(ಬೆಳ್ತಂಗಡಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಆರೋಗ್ಯ ಕೇಂದ್ರ ಆರೋಗ್ಯ ಘಟಕ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿರುವ ೩೦ ಹಾಸಿಗೆಗಳ ಸರ್ಕಾರಿ ಆಸ್ಪತ್ರೆಗಳಿಗೆ ವರ್ಷ ಒಂದಕ್ಕೆ ಸರಬರಾಜು ಮಾಡಬೇಕಾಗಿರುವ ಔಷಧಿಗಳ ಪ್ರಮಾಣ ಹಾಗೂ ಮೊತ್ತ ವೆಷ್ಟು ?

ಆ) ಇಲಾಖೆಯಿಂದ ಆರೋಗ್ಯ ಕೇಂದ್ರಗಳಿಗೆ ಮತ್ತು ಆರೋಗ್ಯ ಘಟಕಗಳಿಗೆ ಕಳಪೆ ಔಷಧಿ ಹಾಗೂ ಸಾಮಗ್ರಿಗಳನ್ನು ಸರಬರಾಜು ಮಾಡುತ್ತಿರುವ ವಿಚಾರವು ಸರ್ಕಾರಕ್ಕೆ ಬಂದಿದೆಯೇ ?

ಇ) ಸಂಬಂಧಪಟ್ಟ ಆರೋಗ್ಯ ಕೇಂದ್ರ ಹಾಗೂ ಘಟಕಗಳು ಆಯಾ ಕೇಂದ್ರಗಳಿಗೆ ಬೇಕಾದ ಔಷಧಿಯನ್ನು ಸರಬರಾಜು ಮಾಡಬೇಕೆಂದು ಮನವಿ ಸಲ್ಲಿಸಿದ್ದರೂ ಆಯಾ ಕೇಂದ್ರದ ಮನವಿಯಂತೆ ಔಷಧಿಯನ್ನು ಸರಬರಾಜು ಮಾಡದೆ ಅವರಿಗೆ ಬೇಡವಾದ ಔಷಧಿಯನ್ನು ಸರಬರಾಜು ಮಾಡಲು ಕಾರಣವೇನು ?

ಈ) ಸರಿಯಾದ ರೀತಿಯಲ್ಲಿ ಔಷಧಿಯನ್ನು ಸರಬರಾಜು ಮಾಡಲು ಏನು ಕ್ರಮ ತೆಗೆದುಕೊಳ್ಳಲಾಗುವುದು ?